**ದಿನಾಂಕ 19.02.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಎಸ್.ಹೆಚ್.ಬಿ. ವಕೀಲರಿಂದಃ**

1. 14.09.1990 ರಲ್ಲಿ ಅಫ್ಸಲ್ ಉನ್ನೀಸ ಅವರ ಗಂಡನಿಗೆ 7 ಮತ್ತು 5 ನೇ ಪ್ರತಿವಾದಿಗಳು ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಗೊತ್ತಿದೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿದ್ದೇನೆ. ಕೇಸಿಗಾಗಿ ಮಾಹಿತಿಯನ್ನು ವಕೀಲರಿಗೆ ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಿಮಗೆ ಭಾಗ ಇಲ್ಲ ಎಂದು ನೀವು ಕೇಸು ಹಾಕುತ್ತೀರಾ ಎಂದು ವಕೀಲರು ಕೇಳಿದ್ದರು, ಅದಕ್ಕೆ ನಾವು ಕೇಸು ಹಾಕುತ್ತೇವೆ ಎಂದು ಹೇಳಿದ್ದೆವು, ಆದರೆ ಸದರಿ ವಕೀಲರು ಈಗ ತೀರಿಕೊಂಡಿರುತ್ತಾರೆ. ಮೆಹಬೂಬ್ ರವರ ಹೆಸರಿಗೆ 14 ವರ್ಷ ಖಾತೆ ಇತ್ತು ಎಂದರೆ ಸರಿ.
2. ಮೆಹಬೂಬ್ ಎಂದರೆ ಅಫ್ಸಲ್ ರವರ ಗಂಡ ಎಂದರೆ ಸರಿ. ಸದರಿ ಮೆಹಬೂಬ್ 3 ಮತ್ತು 4 ನೇ ಪ್ರತಿವಾದಿಗಳ ತಂದೆ ಎಂದರೆ ಸರಿ. ಮೆಹಬೂಬ್ ರವರಿಗೆ ಖಾತೆಯಾಗಿರುವ ವಿಚಾರವನ್ನು ನಾವು ಬೇರೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. 1990 ನೇ ಸಾಲಿನಲ್ಲಿ ಮೆಹಬೂಬ್ ರವರಿಗೆ ಖಾತೆಯಾಗಿರುವ ವಿಚಾರ ನಿಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. 12.10.2004 ರಂತೆ 1 ನೇ ಪ್ರತಿವಾದಿಗೆ ಮೆಹಬೂಬ್ ಮತ್ತು ಅವರ ಮಕ್ಕಳು ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಾದ ನಂತರ ಕೇಳಿದ್ದೇನೆ. 2004 ರಲ್ಲಿ ಆ ರೀತಿ ಗೊತ್ತಾಯಿತಾ ಎಂದರೆ ಸಾಕ್ಷಿಯು 2016 ರಲ್ಲಿ ಆ ರೀತಿ ಗೊತ್ತಾಗಿದೆ ಎಂದು ನುಡಿಯುತ್ತಾರೆ. ಖಾತೆ ಪಹಣಿಯು ಅವರ ಹೆಸರಿಗೆ 1 ನೇ ಪ್ರತಿವಾದಿಯ ಹೆಸರಿಗೆ ಬಂದಿದ್ದು ಗೊತ್ತಿತ್ತು ಎಂದರೆ ಸರಿಯಲ್ಲ. ಅವರ ಹೆಸರಿಗೆ ಖಾತೆ ಬಂದಿರುವುದನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ.
3. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ, ಅದು ನನ್ನ ತಂದೆಗೆ ಸೇರಿದೆ. ಅದರಲ್ಲಿ ಹಳ್ಳವನ್ನು ತೋಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಏನೆಲ್ಲಾ ಬೆಳೆ ಇದೆ ಎಂದರೆ ಸಾಕ್ಷಿಯು ಅದರಲ್ಲಿ ಮಾವಿನ ಗಿಡಗಳು ಮತ್ತು ಇತರೆ ಮರಗಳು ಇದ್ದವು. 1 ನೇ

ಪ್ರತಿವಾದಿಯು ಹಳ್ಳವನ್ನು ಸಮಪಟ್ಟು ಮಾಡಿ 140 ತೆಂಗು ಗಿಡ, 1100 ಅಡಿಕೆ, 40 ಮಾವಿನ ಮರ ಹಾಗೂ 44 ನಿಂಬೆ ಗಿಡ, ಸೀಬೆ ಮರ 15 ಬೆಳೆಸಿದ್ದಾರೆ ಎಂದರೆ ಅವರು ಮಾಡಿಕೊಂಡಿರಬಹುದು, ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದು, ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನನ್ನ ಭಾಗ ನನಗೆ ಬರಬೇಕು ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**